ನಾನು ಅಲ್ಲಾಹನ ಸಂದೇಶವಾಹಕರೊಡನೆ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಆಕಸ್ಮಿಕ ನೋಟದ ಬಗ್ಗೆ ಕೇಳಿದೆ. ಆಗ ಅವರು ನನಗೆ ದೃಷ್ಟಿಯನ್ನು ತಿರುಗಿಸಲು ಹೇಳಿದರು

ಜರೀರ್ ಬಿನ್ ಅಬ್ದುಲ್ಲಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು
ಹೇಳಿದರು: "ನಾನು ಅಲ್ಲಾಹನ ಸಂದೇಶವಾಹಕರೊಡನೆ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು
ಶಾಂತಿಯಿರಲಿ) ಆಕಸ್ಮಿಕ ನೋಟದ ಬಗ್ಗೆ ಕೇಳಿದೆ. ಆಗ ಅವರು ನನಗೆ ದೃಷ್ಟಿಯನ್ನು ತಿರುಗಿಸಲು ಹೇಳಿದರು."
[صحيح] [رواه مسلم]

ಒಬ್ಬ ಪುರುಷ ಅನ್ಯ ಮಹಿಳೆಯನ್ನು ಆಕಸ್ಮಿಕವಾಗಿ ಉದ್ದೇಶಪೂರ್ವಕವಲ್ಲದೆ ನೋಡುವುದರ ಬಗ್ಗೆ ಜರೀರ್ ಬಿನ್ ಅಬ್ದುಲ್ಲಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ಪ್ರವಾದಿಯವರೊಡನೆ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಕೇಳಿದರು. ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅವರೊಡನೆ ತಕ್ಷಣ ಇನ್ನೊಂದು ದಿಕ್ಕಿಗೆ ಅಥವಾ ಇನ್ನೊಂದು ಕಡೆಗೆ ಕಡ್ಡಾಯವಾಗಿ ಮುಖ ತಿರುಗಿಸಬೇಕೆಂದು ಆದೇಶಿಸಿದರು. ಆ (ಪ್ರಥಮ) ನೋಟಕ್ಕಾಗಿ ಅವರಿಗೆ ಯಾವುದೇ ಶಿಕ್ಷೆಯಿರುವುದಿಲ್ಲ.

http://sunnah.global/hadeeth/kn/show/8902